ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ
ದಿನಾಂಕ : DATE : 10/1/2020

**ನ.17ರಂದು ನಡೆದಿದ್ದ ತನ್ವೀರ್ ಕೊಲೆ ಯತ್ನ ಪ್ರಕರಣ | ಆರೋಪಿಗಳ ಪರೇಡ್**

# ಹತ್ಯೆಗೆ ಯತ್ನಿಸಿದವನನ್ನು ಗುರುತಿಸಿದ ಸೇಠ್

■ ವಿಜಯವಾಣಿ ಸುದ್ದಿಜಾಲ ಮೈಸೂರು

ಶಾಸಕ ತನ್ವೀರ್ ಸೇಠ್ ಹತ್ಯೆಗೆ ಯತ್ನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಗುರುತು ಪತ್ತೆಗೆ ಗುರುವಾರ ನಗರದ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ನಡೆದ ಆರೋಪಿಗಳ ಪರೇಡ್‌ನಲ್ಲಿ ಸೇಠ್ ಆರೋಪಿಯನ್ನು ಗುರ್ತಿಸಿದ್ದಾರೆ.

ಬನ್ನಿಮಂಟಪದಲ್ಲಿ ನ.17ರಂದು ವಿವಾಹ ಸಮಾರಂಭವೊಂದರಲ್ಲಿ ಭಾಗವಹಿಸಿದ್ದ ತನ್ವೀರ್ ಸೇಠ್ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಹತ್ಯೆಗೆ ಯತ್ನಿಸಲಾಗಿತ್ತು. ತೀವ್ರ ಸ್ವರೂಪದಲ್ಲಿ ಗಾಯಗೊಂಡಿದ್ದ ಅವರನ್ನು ನಗರದ ಕೊಲಂಬಿಯಾ ಏಷಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗುಣಮುಖರಾದ ನಂತರ ಅವರು ಹೆಚ್ಚಿನ ಚಿಕಿತ್ಸೆಗೆ ದುಬೈಗೆ ತೆರಳಿದ್ದರು. ಬುಧವಾರ ಸಂಜೆ ಅವರು ದೇಶಕ್ಕೆ ಹಿಂತಿರುಗಿದ್ದಾರೆ.

**ಬಿಗಿ ಬಂದೋಬಸ್ತ್:** ಆರೋಪಿಗಳ ಗುರುತುಪತ್ತೆ ಪರೇಡ್‌ಗೆ ತನ್ವೀರ್ ಸೇಠ್ ಆಗಮಿಸಿದ ಹಿನ್ನೆಲೆಯಲ್ಲಿ ಕಾರಾಗೃಹದ ಎದುರು ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ತನ್ವೀರ್ ಸೇಠ್ ಅವರೊಂದಿಗೆ 6 ಪ್ರತ್ಯಕ್ಷದರ್ಶಿಗಳು ಆಗಮಿಸಿದ್ದರು. ಪ್ರತ್ಯಕ್ಷದರ್ಶಿಗಳ ಮೂಲಕ ತನ್ವೀರ್ ಸೇಠ್ ಅಪರಾಧಿಯ ಗುರುತು ಪತ್ತೆಹಚ್ಚಿದರು. ತನ್ವಿರ್ ಸೇಠ್ ಅವರೊಂದಿಗೆ ಪ್ರತ್ಯಕ್ಷದರ್ಶಿಗಳಾದ ಸುಯೇಲ್ ಬೇಗ್, ಖಾದರ್ ಸೇಠ್, ಕುರತ್, ಮಹಮ್ಮದ್ ಮುತ್ತಾಜ್, ಅಕ್ಬರ್ ಅಲಿ, ಶಾಸಕರ ಗನ್‌ಮ್ಯಾನ್ ಫೈರೋಜ್ ಖಾನ್ ಇದ್ದರು.

**ಕಣ್ಣೀರು ಸುರಿಸಿದ ಅಭಿಮಾನಿಗಳು:** ತನ್ವೀರ್ ಸೇಠ್ ಅವರನ್ನು ನೋಡಲು ಸಾಕಷ್ಟು ಸಂಖ್ಯೆಯಲ್ಲಿ ಅವರ ಅಭಿಮಾನಿಗಳು ಕಾರಾಗೃಹ ಆವರಣದಲ್ಲಿ ನೆರೆದಿದ್ದರು. ಸೇಠ್ ಕಾರಿನಿಂದ ಇಳಿಯುತ್ತಿದ್ದಂತೆ ಅಭಿಮಾನಿಗಳು ಅವರ ಕಾಲಿಗೆರಗಿ ಅಭಿಮಾನ ಪ್ರದರ್ಶಿಸಿದರು. ಅವರ ಪರ ಘೋಷಣೆಗಳನ್ನು ಕೂಗಿ ಅವರನ್ನು ಭೇಟಿ ಮಾಡಲು ಮುಗಿಬಿದ್ದರು. ಈ ಸಂದರ್ಭ ಅಭಿಮಾನಿಗಳನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟರು. ಹಲ್ಲೆಯಿಂದ ತನ್ವೀರ್ ಧ್ವನಿ ಬದಲಾಗಿರುವುದನ್ನು ಕೇಳಿ ಅಭಿಮಾನಿಗಳು ಕಣ್ಣೀರು ಸುರಿಸಿದರು.



ಮೈಸೂರು ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ ತನ್ವೀರ್ ಸೇಠ್.

## ಅಂದು ಏನಾಯ್ತು ಎಂದು ಗೊತ್ತಾಗಲಿಲ್ಲ

ನನಗೆ ಅಂದು ಏನಾಯ್ತು ಎಂಬುದು ತಕ್ಷಣ ಗೊತ್ತಾಗಲಿಲ್ಲ, ಹಲ್ಲೆಯಿಂದ ಆಘಾತಗೊಂಡಿದ್ದೆ. ಹೀಗಾಗಿ ಯಾರು ಹಲ್ಲೆ ಮಾಡಿದರು ಎಂಬುದು ಗೊತ್ತಾಗಲಿಲ್ಲ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದರು. ಹಲ್ಲೆಯಿಂದ ನನ್ನ ಧ್ವನಿ ಬದಲಾಗಿದೆ. ಇದು ಸರಿಯಾಗಲು ಇನ್ನು ಎರಡ್ಮೂರು ತಿಂಗಳು ಬೇಕು. ಯಾವುದೇ ಜನಪ್ರತಿನಿಧಿಗೆ ಈ ರೀತಿ ಆಗಬಾರದು. ಇದು ಜನಪ್ರತಿನಿಧಿಗಳಲ್ಲಿ ಭಯ ಹುಟ್ಟಿಸುವ ಘಟನೆಯಾಗಿದೆ. ಸಾರ್ವಜನಿಕ ಸೇವೆಯಲ್ಲಿರುವವರಿಗೆ ಭದ್ರತೆ ಬಹುಮುಖ್ಯ ಎಂದರು. ಜನರ ಹಾಗೂ ಹಿರಿಯರ ಆಶೀರ್ವಾದದಿಂದ ನಾನು ಬದುಕಿ ಬಂದಿದ್ದೇನೆ. ನನ್ನನ್ನು ನೋಡಲು ಬಂದ ಎಲ್ಲ ಪಕ್ಷದ ನಾಯಕರಿಗೆ ನಾನೇ ಖುದ್ದಾಗಿ ಕೃತಜ್ಞತಾ ಪತ್ರ ಬರೆದಿದ್ದೇನೆ. ಇಂತಹ ಘಟನೆ ಮರುಕಳಿಸಬಾರದು. ಪ್ರತ್ಯಕ್ಷದರ್ಶಿಗಳ ಸಹಕಾರದೊಂದಿಗೆ ಆರೋಪಿಯ ಗುರುತು ಪತ್ತೆ ಮಾಡಿದ್ದೇನೆ ಎಂದರು.